

# ಗೊಂಬೆಗಳ ಲೋಕದಲ್ಲಿ...



**ಗುಜರಾತ್‌ನ ರಾಜಾಕೋಟ್‌ನಲ್ಲಿನ 'ಡಾಲ್ಸ್ ಮ್ಯೂಸಿಯಂ', ಗೊಂಬೆಗಳ ಮೂಲಕ ದೇಶ ವಿದೇಶಗಳ ಭಿನ್ನ ಸಂಸ್ಕೃತಿಗಳನ್ನು ಪರಿಚಯಿಸುವ ಅಪರೂಪದ ಸಂಗ್ರಹಾಲಯ.**

■ ಎಸ್. ಪ್ರಭಾವತಿ

ಗುಜರಾತ್‌ನ ರಾಜಾಕೋಟ್‌ಗೆ ಈಚೆಗೆ ಭೇಟಿ ಕೊಟ್ಟಿದ್ದ ನಮಗೆ, ಅಲ್ಲೇ ಸಮೀಪದಲ್ಲಿ ವಿಶೇಷ ಮ್ಯೂಸಿಯಂ ಇರುವುದರ ಬಗ್ಗೆ ಮಾಹಿತಿ ತಿಳಿಯಿತು. ಭಿನ್ನ ಭಿನ್ನ ರೀತಿಯ ಸಾವಿರಾರು ಗೊಂಬೆಗಳನ್ನೊಳಗೊಂಡ ಮ್ಯೂಸಿಯಂ ಅದೆಂದು ತಿಳಿದಿದ್ದೇ, ನೋಡಲು ಹುಮ್ಮಸ್ಸಿನಿಂದ ಹೊರಟೆವು.

ರಾಜಾಕೋಟ್ ನಗರದ ಜನಜಂಗುಳಿ, ಗದ್ದಲದ ನಡುವೆಯೇ ಇರುವ ಜುಬಿಲಿ ಗಾರ್ಡನ್‌ನಲ್ಲಿ ಈ ಮ್ಯೂಸಿಯಂ ರೂಪಿಸಲಾಗಿದೆ. ಇದಕ್ಕೆ 'ರೋಟರಿ ಡಾಲ್ಸ್ ಮ್ಯೂಸಿಯಂ' ಎಂದು ನಾಮಕರಣ ಮಾಡಲಾಗಿದೆ. ಮಕ್ಕಳಿಗೆ ಇಷ್ಟವಾಗುವ ಗೊಂಬೆಗಳ ಮೂಲಕ ದೇಶ ವಿದೇಶಗಳ ಸಂಸ್ಕೃತಿ– ಸಂಪ್ರದಾಯಗಳನ್ನು ಎಲ್ಲರಿಗೂ ಪರಿಚಯಿಸುವ ಉದ್ದೇಶದೊಂದಿಗೆ 2001ರಲ್ಲಿ ಈ ಸಂಗ್ರಹಾಲಯವನ್ನು ತೆರೆಯಲಾಗಿದೆ.

ಗೊಂಬೆ ಮ್ಯೂಸಿಯಂ ಹಲವು ಕಾರಣಗಳಿಗೆ ವಿಶೇಷವೆನಿಸಿತು. ಚೆಂದ ಚೆಂದದ ಗೊಂಬೆಗಳು ಕಣ್ಮನ ಸೆಳೆದವು ಎಂಬುದು ಒಂದು ವಿಷಯವಾದರೆ, ಗೊಂಬೆಗಳ ಮೂಲಕ ವಿಶ್ವದ ಹಲವು ಸಂಸ್ಕೃತಿಗಳು ಮತ್ತು ಸಂಪ್ರದಾಯ, ಜೀವನರೀತಿಯನ್ನು ಪರಿಚಯಿಸಿದ್ದು ಇಷ್ಟವಾಯಿತು. ಪ್ರಪಂಚದೆಲ್ಲೆಡೆಯ ಗೊಂಬೆಗಳ ದೊಡ್ಡ ಸಂಗ್ರಹವೇ ಇಲ್ಲಿದೆ. ಪ್ರತಿ ಗೊಂಬೆಯೂ ತನ್ನ ದೇಶದ ವಿಶೇಷ ಉಡುಪಿನಲ್ಲಿ ಬಿಂಬಿತವಾಗಿದೆ. ಗೊಂಬೆಯನ್ನು ತಂದ ದೇಶ, ಅದರ ರಾಷ್ಟ್ರಗೀತೆ, ಇತಿಹಾಸ ಮತ್ತು ಅಲ್ಲಿನ ಸಂಸ್ಕೃತಿಯ ಬಗ್ಗೆ ಮಾಹಿತಿಯೂ ಗೊಂಬೆಗಳ ಜೊತೆಗೇ ಇರುತ್ತದೆ.



ನೀಲಿ ಕಣ್ಣಿನ ಬಾರ್ಬಿಗಳು, ದಾರದ ಬೊಂಬೆಗಳು, ಡಿಸೈನರ್ ಗೊಂಬೆಗಳು, ಹೊಟ್ಟಿನ ಗೊಂಬೆಗಳು, ಸ್ಟ್ರಿಂಗ್ ಬೊಂಬೆಗಳು... ಹೀಗೆ ಗೊಂಬೆಗಳ ತಯಾರಿ, ವಿನ್ಯಾಸದ ವಿಶಿಷ್ಟತೆಯನ್ನೂ ಇಲ್ಲಿ ಕಾಣಬಹುದು. ಜಾನಪದ ನೃತ್ಯವನ್ನು ಚಿತ್ರಿಸುವ ಗೊಂಬೆಗಳ ಸಂಗ್ರಹವೇ ಸಾಕಷ್ಟಿದೆ. ವಿವಿಧ ದೇಶಗಳ ಗೊಂಬೆಗಳನ್ನು ಕಿಯೋಸ್ಕ್ ಮೂಲಕ ಪ್ರದರ್ಶಿಸುವ ವ್ಯವಸ್ಥೆಯೂ ಇದೆ.

ವಿಶ್ವದ 102ಕ್ಕೂ ಹೆಚ್ಚು ದೇಶಗಳ 1600ಕ್ಕೂ ಹೆಚ್ಚು ಗೊಂಬೆಗಳನ್ನು ಈ ವಸ್ತುಸಂಗ್ರಹಾಲಯದಲ್ಲಿ ಕಾಣಬಹುದು. ದೇಶದೆಲ್ಲೆಡೆಯಿರುವ ರೋಟರಿ ಕ್ಲಬ್ ಗೊಂಬೆಗಳನ್ನು ಈ ವಸ್ತುಸಂಗ್ರಹಾಲಯಕ್ಕೆ ಒದಗಿಸಿದೆ. ಇತರ ದೇಶಗಳೊಂದಿಗೆ ಗೊಂಬೆ ವಿನಿಮಯ ಕಾರ್ಯಕ್ರಮದ ಮೂಲಕವೂ ಸಂಗ್ರಹಿಸಲಾಗಿದೆ.

ಪ್ರತಿವರ್ಷ ಸ್ವಿಟ್ಜರ್ಲೆಂಡ್, ಮಲೇಷ್ಯಾ, ಅಮೆರಿಕ ಮತ್ತು ಇತರ ದೇಶಗಳಿಂದ ರೋಟೇರಿಯನ್ ಸ್ನೇಹಿತರು ಈ ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡುತ್ತಾರೆ.

ತನ್ನ ವಿಶಿಷ್ಟವಾದ ಗೊಂಬೆಗಳ ಸಂಗ್ರಹಕ್ಕಾಗಿ 2007ರಲ್ಲಿ ರೋಟರಿ ಡಾಲ್ಸ್ ಮ್ಯೂಸಿಯಂ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲೆ ಬರೆದಿದೆ. ಅಲ್ಲದೆ ವರ್ಲ್ಡ್ ರೆಕಾರ್ಡ್ಸ್ ಇಂಡಿಯಾ ಅಂಡ್ ವರ್ಲ್ಡ್ ಅಮೇಜಿಂಗ್ ರೆಕಾರ್ಡ್ಸ್‌ನಲ್ಲಿಯೂ



ಗರಿಷ್ಠ ಗೊಂಬೆಗಳ ಸಂಗ್ರಹಕ್ಕಾಗಿ ದಾಖಲೆ ನಿರ್ಮಿಸಿದೆ. ಮಕ್ಕಳಿಗಾಗಿ ವಿವಿಧ ಸೃಜನಾತ್ಮಕ ಚಟುವಟಿಕೆಗಳನ್ನೂ ವಸ್ತು ಸಂಗ್ರಹಾಲಯದಲ್ಲಿ ನಡೆಸಲಾಗುತ್ತದೆ. ಡಾಲ್ ಮ್ಯೂಸಿಯಂ ವೀಕ್ಷಿಸಲು ಸುಮಾರು 2 ಗಂಟೆ ಅವಧಿ ಬೇಕಾಗುತ್ತದೆ. ಸಂಗ್ರಹಾಲಯದಲ್ಲಿ ಗ್ರಂಥಾಲಯವೂ ಇದೆ. ಪ್ರವಾಸಿಗರು ತಮ್ಮ ಪ್ರವಾಸದ ಅನುಭವದ ಜೊತೆಗೆ ನೆನಪಿಗಾಗಿ ಗೊಂಬೆಗಳನ್ನು ಕೊಳ್ಳಲು ಅಂಗಡಿಗಳೂ ಇವೆ.

ಬಾಲ್ಯಕ್ಕೆ ಕರೆದೊಯ್ಯುವ ಈ ಗೊಂಬೆಗಳ ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡುವುದು ಸುಂದರ ನೆನಪಾಗಿ ಉಳಿಯುವುದಂತೂ ಖಚಿತ.

ಪ್ರತಿಕ್ರಿಯಿಸಿ: feedback@sudha.co.in